ರೈತ ರತ್ನ ರಿಯಾಲಿಟಿ ಶೋ ಇಂದಿನಿಂದ

ಬೆಂಗಳೂರು: ಕೃಷಿ ಇಲಾಖೆ ಸಹಯೋಗದೊಂದಿಗೆ ದೂರದರ್ಶನ ಚಂದನ ವಾಹಿನಿಯಲ್ಲಿ 'ರೈತ ರತ್ನ' ಶೀರ್ಷಿಕೆಯಡಿ ರೈತ ನಾಯಕರನ್ನು ಜನರಿಗೆ ಪರಿಚಯಿಸುವಂತಹ ರಿಯಾಲಿಟಿ ಶೋ ಮೂಡಿಬರಲಿದ್ದು, ಶನಿವಾರ (ಏ.18) ಮೊದಲ ಕಂತು ಪ್ರಸಾರವಾಗಲಿದೆ.

ಕೃಷಿಗೆ ಸಂಬಂಧಿಸಿದಂತೆ ರಾಜ್ಯಾದ್ಯಂತ 26 ಸಾಧಕ ರೈತರನ್ನು ಆಯ್ಕೆ ಮಾಡಲಾಗುವುದು. ದೇಶದ ಟಿ.ವಿ. ವಾಹಿನಿಗಳ ಇತಿಹಾಸದಲ್ಲೇ ಕೃಷಿಗೆ ಸಂಬಂಧಿಸಿದ ಇಂತಹ ರಿಯಾಲಿಟಿ ಶೋ ಪ್ರಥಮ ಪ್ರಯತ್ನವಾಗಿದ್ದು, ಈ ಸರಣಿ ಕಾರ್ಯಕ್ರಮವು ಒಟ್ಟು 26 ಕಂತುಗಳಲ್ಲಿ ಪ್ರತಿ ಶನಿವಾರ ಸಂಜೆ 6 ರಿಂದ 7 ಗಂಟೆಯವರೆಗೆ (1 ಗಂಟೆ ಕಾರ್ಯಕ್ರಮ) ಚಂದನ ವಾಹಿನಿಯಲ್ಲಿ ಪ್ರಸಾರವಾಗಲಿದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಕುಲಪತಿ ಡಾ. ಎಸ್.ವಿ. ಸುರೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರೈತರ ಬಗ್ಗೆ ಇರುವ ನಕಾರಾತ್ಮಕ ವಿಚಾರಗಳನ್ನು ದೂರ ಮಾಡಿ ರೈತನೇ ನಿಜವಾದ ನಾಯಕ ಎಂಬ ಸಂದೇಶ ಸಾರುವ ವಿನೂತನ ಸರಣಿ ಇದಾಗಿದೆ. ಹೊಸ ತಂತ್ರಜ್ಞಾನದ ಮೂಲಕ ಸ್ಮಾರ್ಟ್ ಆಗಿ ಕೃಷಿಯಲ್ಲಿ ಹೇಗೆ ಲಾಭ ಗಳಿಸಬಹುದು ಎಂಬುದನ್ನು ಈ ಸರಣಿಯಲ್ಲಿ ತಿಳಿಯಬಹುದು ಎಂದು ವಿವರಿಸಿದರು.

- **ದೂರದರ್ಶನ ಚಂದನ ವಾಹಿನಿಯಲ್ಲಿ ಪ್ರತಿ ಶನಿವಾರ ಪ್ರಸಾರ**
- **ಕೃಷಿ ಇಲಾಖೆ ಸಹಯೋಗ**

Vijayavani pg 08

Udayavani pg 05

ಚಂದನದಲ್ಲಿ ಇಂದಿನಿಂದ 'ರೈತ ರತ್ನ' ರೈತರ ರಿಯಾಲಿಟಿ ಶೋ

ಪ್ರತಿ ಶನಿವಾರ ಸಂಜೆ 6 ರಿಂದ 1 ಗಂಟೆ ಶೋ | ಟಿವಿ ವಾಹಿನಿಗಳ ಇತಿಹಾಸದಲ್ಲೇ ಕೃಷಿ ಸಂಬಂಧಿಸಿದಂತೆ ಶೋ ಇದೇ ಮೊದಲು: ಡಾ.ಸುರೇಶ್

■ ಉದಯವಾಣಿ ಸಮಾಚಾರ

ಬೆಂಗಳೂರು: ಕೃಷಿ ಇಲಾಖೆ ಸಹಯೋಗದಲ್ಲಿ ದೂರದರ್ಶನ ಚಂದನ ವಾಹಿನಿಯಲ್ಲಿ 'ರೈತ ರತ್ನ' ಶೀರ್ಷಿಕೆಯಡಿ ಸಾಧಕ ರೈತರನ್ನು ನಾಡಿಗೆ ಪರಿಚಯಿಸುವಂತಹ ರಿಯಾಲಿಟಿ ಶೋ ಸರಣಿ ಕಾರ್ಯಕ್ರಮ ಏ.18 (ಇಂದಿನಿಂದ) ಮೂಡಿಬರಲಿದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಕುಲಪತಿ ಡಾ.ಎಸ್.ವಿ.ಸುರೇಶ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷಿಗೆ ಸಂಬಂಧಿಸಿದಂತೆ ನಾಡಿನಾದ್ಯಂತ ಆಯ್ದ 26 ಸಾಧಕ ರೈತರು ಕಾರ್ಯಕ್ರಮದ ಸಾಧಕ ಕುರ್ಚಿಯ ಮೇಲೆ ಕುಳಿತು ಮಾತನಾಡಲಿದ್ದಾರೆ. ದೇಶದ ಟಿ.ವಿ. ವಾಹಿನಿಗಳ ಇತಿಹಾಸದಲ್ಲೇ ಕೃಷಿಗೆ ಸಂಬಂಧಿಸಿದ ಇಂತಹ ರಿಯಾಲಿಟಿ ಶೋ ಪ್ರಥಮ ಪ್ರಯತ್ನವಾಗಿದ್ದು, ಈ ಸರಣಿ ಕಾರ್ಯಕ್ರಮವು ಒಟ್ಟು 26 ಕಂತುಗಳಲ್ಲಿ ಪ್ರತಿ ಶನಿವಾರ ಸಂಜೆ 6 ರಿಂದ 7 ಗಂಟೆಯವರೆಗೆ (1ಗಂಟೆ ಕಾರ್ಯಕ್ರಮ) ಚಂದನ ವಾಹಿನಿಯಲ್ಲಿ ಮೂಡಿಬರಲಿದೆ ಎಂದರು.



ರೈತ ರತ್ನ ಸರಣಿ ಕಾರ್ಯಕ್ರಮ ಕುರಿತು ಬೆಂಗಳೂರು ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್ ಮಾತನಾಡಿದರು. ಚಂದನ ವಾಹಿನಿಯ ಉಪ ಮಹಾನಿರ್ದೇಶಕ ಹನುಮಂತ ಸೇರಿ ಇತರರಿದ್ದರು.

ರೈತರ ಬಗ್ಗೆ ಇರುವ ನಕಾರಾತ್ಮಕ ವಿಚಾರಗಳನ್ನು ದೂರ ಮಾಡಿ ರೈತನೇ ನಿಜವಾದ ನಾಯಕ ಎಂಬ ಸಂದೇಶ ಸಾರುವ ವಿನೂತನ ಸರಣಿ ಕಾರ್ಯಕ್ರಮ ಇದಾಗಿದೆ. ಕಾರ್ಯಕ್ರಮಕ್ಕೆ ಈಗಾಗಲೇ ಕೃಷಿ ಸಚಿವರಿಂದ ಚಾಲನೆ ದೊರೆತಿದ್ದು, ಈ ಸಂಬಂಧ ಸಾಧಕ ರೈತನ ಪರಿಚಯ, ಕೃಷಿ ಬೆಳೆಗಳು, ಉಪಕಸುಬು, ಪರಿಸರ, ರೈತ ಕುಟುಂಬದ ಸದಸ್ಯರು, ಸಂಬಂಧಿ, ಸ್ನೇಹಿತರು, ಸ್ಥಳೀಯ ಜನರು ಹಂಚಿಕೊಂಡ ಅನಿಸಿಕೆಗಳು ಕುರಿತು ಸ್ಥಳಗಳಿಗೆ ತೆರಳಿ ಈಗಾಗಲೇ ಚಿತ್ರೀಕರಣ ನಡೆಸಲಾಗಿದೆ. ಅದರಂತೆ ಸರಣಿ ಕಾರ್ಯಕ್ರಮದ ಮೂಲಕ ಪ್ರತಿವಾರವೂ ಒಬ್ಬ ಸಾಧಕ ರೈತರನ್ನು ನಾಡಿಗೆ ಪರಿಚಯಿಸಲಾಗುವುದು ಎಂದು ಹೇಳಿದರು.

ಈ ಸರಣಿಯಲ್ಲಿ ಸಮಗ್ರ ಕೃಷಿ, ಸಾವಯವ, ನೈಸರ್ಗಿಕ ಕೃಷಿಯೊಂದಿಗೆ ರೈತನ ಸಂಕಷ್ಟಗಳ ಕುರಿತು ಪರಿಚಯವಾಗಲಿದೆ. ಯಶಸ್ಸು ಕಂಡ ಸಾಧಕರ ಪಟ್ಟಿಯಲ್ಲಿ ರೈತ ಮಹಿಳೆಯರು ಮತ್ತು ಮಹಿಳೆಯರಿದ್ದಾರೆ. ವೇದಿಕೆ ಕಾರ್ಯಕ್ರಮದಲ್ಲಿ ಸಾಧಕ ರೈತರನ್ನು ಪರಿಚಯಿಸಿ ಅವರ ಕುಟುಂಬ, ಒಡನಾಡಿಗಳನ್ನು ಆಹ್ವಾನಿಸಿ ಅವರ ಕಷ್ಟ ಸಾಧನೆಗಳ ಕುರಿತು ಅನಿಸಿಕೆಗಳನ್ನು ಹಂಚಿಕೊಳ್ಳಲಿದ್ದಾರೆ. 26 ಸಾಧಕ ರೈತರ ಸರಣಿ ಕಂತಿನ ಬಳಿಕ ಅಂತಿಮವಾಗಿ ಈ ಪೈಕಿ ಮೂವರನ್ನು ರೈತರತ್ನ ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು. ಈ ಸರಣಿ ಕಾರ್ಯಕ್ರಮದ ತೀರ್ಪುಗಾರರಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹ ವಿಸ್ತರಣಾ ನಿರ್ದೇಶಕ ಡಾ.ಕೆ.ಪಿ. ರಘುಪ್ರಸಾದ್ ಮತ್ತು ಧಾರವಾಡದ ಸಹಾಯಕ ಕೃಷಿ ನಿರ್ದೇಶಕ ಚನ್ನಪ್ಪಅಂಗಡಿ ನಿರ್ವಹಿಸಲಿದ್ದಾರೆ ಎಂದರು.

ಗೋಷ್ಠಿಯಲ್ಲಿ ಚಂದನ ವಾಹಿನಿಯ ಉಪ ಮಹಾನಿರ್ದೇಶಕ ಹನುಮಂತ, ಕಾರ್ಯಕ್ರಮ ವಿಭಾಗದ ಮುಖ್ಯಸ್ಥೆ ಎಚ್.ಎನ್. ಆರತಿ, ದೂರದರ್ಶನ ಕಾರ್ಯಕ್ರಮ ಅಧಿಕಾರಿ ಎಚ್.ಎನ್.ಗೋಪಿನಾಥ್, ಸಿ.ಬಾಬು ರೆಡ್ಡಿ, ಲಕ್ಷ್ಮಿ ಕಾರಂತ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮನ್ ಕೀ ಬಾತ್‌ನಲ್ಲಿ ಕಲಬುರಗಿ ಖಡಕ್ ರೊಟ್ಟಿ ಕೊಂಡಾಡಿದ ಪ್ರಧಾನಿ ನರೇಂದ್ರ ಮೋದಿ

ಅಮೆರಿಕಕ್ಕೆ ಕಲಬುರಗಿ ಜಿಲ್ಲೆಯ ಖಡಕ್ ರೊಟ್ಟಿ!

ರಾಜಪ್ಪಾ ಜಂಬಗಿ

ಕಲಬುರಗಿ: ರೊಟ್ಟಿ ತಿಂದವ ಗಟ್ಟಿ ಎಂಬ ಜನಪ್ರಿಯ ಗಾದೆ ಮಾತಿನ ಅರ್ಥವನ್ನು ಜೀವಂತಗೊಳಿಸುವಂತೆ, ಕಲಬುರಗಿಯ ಖಡಕ್ ಜೋಳದ ರೊಟ್ಟಿ ಇದೀಗ ಜಾಗತಿಕ ವೇದಿಕೆಗೆ ಹೆಜ್ಜೆ ಇಡುತ್ತಿದೆ.

ದೇಶದ ಪ್ರಧಾನಿ ನರೇಂದ್ರ ಮೋದಿ ಯವರು ತಮ್ಮ ಮನ್ ಕೀ ಬಾತ್‌ನ 123ನೇ ಸಂಚಿಕೆಯಲ್ಲಿ ಕಲಬುರಗಿ ಮಹಿಳೆಯರ ಸ್ವಾವಲಂಬಿ ಬದುಕಿಗೆ ಉತ್ತೇಜನ ನೀಡುವ ಕಲಬುರಗಿ ರೊಟ್ಟಿ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ ಬಳಿಕ, ಇದರ ಖ್ಯಾತಿ ಮತ್ತಷ್ಟು ಹೆಚ್ಚಾಗಿದೆ.

ಸಾಂಪ್ರದಾಯಿಕ ರುಚಿ, ಪೌಷ್ಟಿಕತೆ ಮತ್ತು ಮಹಿಳಾ ಸಬಲೀಕರಣದ ಸಂಕೇತವಾದ ಕಲಬುರಗಿ ರೊಟ್ಟಿ ಇದೀಗ ಅಮೆರಿಕಾ, ಯುಕೆ ಮತ್ತು ಆಸ್ಟ್ರೇಲಿಯಾ ಸೇರಿದಂತೆ ವಿದೇಶಿ ರಾಷ್ಟ್ರಗಳಿಗೂ ಸರಬರಾಜಾಗಲು ಸಜ್ಜಾಗುತ್ತಿದೆ.

ಗ್ರಾಮೀಣ ಮಹಿಳೆಯರ ಕೈಚಳಕ ಮತ್ತು ಪರಿಶ್ರಮದ ಫಲವಾಗಿ ಬೆಳೆದ ಈ ಉತ್ಪನ್ನ, ಸ್ಥಳೀಯತೆ ಮೀರಿಸಿ ಜಾಗತಿಕ ಮಾರುಕಟ್ಟೆಯಲ್ಲಿ ತನ್ನದೇ ಗುರುತನ್ನು ಮೂಡಿಸಲು ಸನ್ನದ್ಧವಾಗಿದ್ದು, ಕಲಬುರಗಿ ರೊಟ್ಟಿಯ ಈ ಸಾಧನ ಕೇವಲ ಆಹಾರ ಪದಾರ್ಥದ ಯಶಸ್ಸಲ್ಲ, ಮಹಿಳೆಯರ ಆತ್ಮನಿರ್ಭರತೆಗೆ ಹೊಸ ದಿಕ್ಕು ತೋರಿಸುವ ಪ್ರೇರಣಾದಾಯಿ ಹೆಜ್ಜೆಯಾಗಿದೆ.



ಅಮೆರಿಕಾದ 5 ಎಂಜಿನಿಯರ್ಸ್ ಒಪ್ಪಿಗೆ

ಅಮೆರಿಕಾದ ಐದು ಸಾಫ್ಟವೇರ್ ಎಂಜಿನಿಯರ್ಸ್ ಸದ್ಯಕ್ಕೆ ಬೆಂಗಳೂರಿನಲ್ಲಿದ್ದು, ಕಲಬುರಗಿ ರೊಟ್ಟಿ ಸ್ವಾದ ಚೆಕ್ ಮಾಡಲು ಈಗಾಗಲೇ ಅವರಿಗೆ ಕಲಬುರಗಿ ರೊಟ್ಟಿಯ ಐದು ಬಾಕ್ಸ್ ಕಳುಹಿಸಲಾಗಿದೆ. ರೊಟ್ಟಿಯ ಕುರಿತು ಒಪ್ಪಿಗೆ ಸೂಚಿಸಿದ್ದಾರೆ. ರೊಟ್ಟಿಯ ರುಚಿ ಚೆಕ್ ಮಾಡಿದ ಬಳಿಕ ಆರ್ಡರ್ ಪಕ್ಕಾವಾದಲ್ಲಿ ಕಂಪನಿ ಜೊತೆಗೆ ಅಗ್ರಿಮೆಂಟ್ ಮಾಡಿಕೊಂಡು ಪ್ರೀಮಿಯಂ ದರವ ಬೇಡಿಕೆಯೊಂದಿಗೆ ಮುಂಬರುವ ದಿನಗಳಲ್ಲಿ ಆಯಾ ದೇಶಕ್ಕೆ 10 ಸಾವಿರ ರೊಟ್ಟಿಗಳ ಮೊದಲ ಕನ್ಸೈನಮೆಂಟ್ ಹೋಗಲಿದೆ. ಇದೀಗ ನಾವು 150 ರೂಪಾಯಿಗೆ ಒಂದು ಬಾಕ್ಸ್ ಮಾರಾಟ ಮಾಡುತ್ತಿದ್ದು, ಕೋಟನೂರ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಕಲಬುರಗಿ ರೊಟ್ಟಿ ಪ್ಯಾಕಿಂಗ್ ಕೇಂದ್ರ ಮಾಡಲಾಗುತ್ತಿದೆ. ಸಿಎಸ್‌ಆರ್ ಅನುದಾನದಡಿ ಎಚ್‌ಡಿಎಫ್‌ಸಿ ಬ್ಯಾಂಕ್ 55 ಲಕ್ಷ ರೂ. ಮೌಲ್ಯದ ಯಂತ್ರ ಕೊಡುತ್ತಿದೆ. ನಮ್ಮಲ್ಲಿನ ಎಕ್ಸಿಸ್ಟಿಂಗ್ ಆಫೀಸ್ ಸೆಟ್ ಆಫ್ ನಿನ್ಮೋವೇಷನ್‌ಗೆ 30 ಲಕ್ಷ ಖರ್ಚು ಮಾಡಲಾಗುತ್ತಿದೆ ಎಂದು ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಹೊಸ ದಿಗಂತಕ್ಕೆ ತಿಳಿಸಿದರು.

ಆಸ್ಥಮ್ ಎಕ್ಸ್‌ಪೋರ್ಟ್ ಕಂಪನಿಯಿಂದ ಸರಕು: ವಿಶ್ವದ 25 ಕಡೆಗಳಲ್ಲಿ ತಮ್ಮ ಇಂಪೋರ್ಟ್ ಆ್ಯಂಡ್ ಎಕ್ಸ್‌ಪೋರ್ಟ್ ವ್ಯಾಪಾರ ಹೊಂದಿರುವ ಕಲಬುರಗಿ ಮೂಲದವರದೇ ಆಗಿರುವ ಆಸ್ಥಮ್ ಎಕ್ಸ್‌ಪೋರ್ಟ್ ಆ್ಯಂಡ್ ಇಂಪೋರ್ಟ್ ಕಂಪನಿಯವರು ಸದ್ಯಕ್ಕೆ ಭಾರತದಲ್ಲಿದ್ದು, ಅವರೊಂದಿಗೆ ಕಳೆದ ಮೂರು ತಿಂಗಳಿಂದ ಮಾತುಕತೆ ನಡೆಸಿ ಕಲಬುರಗಿಯ ಖಡಕ್ ರೊಟ್ಟಿಗೆ ವಿಶ್ವಮಟ್ಟದಲ್ಲಿ ಸರಕು ಮಾಡಬೇಕೆಂದು ಮಾತುಕತೆ ನಡೆದಿದೆ.

ಪ್ರಾರಂಭಿಕದಲ್ಲಿ ಮೂರು ರಾಷ್ಟ್ರಗಳಾದ ಯುಎಸ್‌ಎ, ಯುಕೆ ಹಾಗೂ ಆಸ್ಟ್ರೇಲಿಯಾಗೆ ರೊಟ್ಟಿಯ ಕ್ವಾಲಿಟಿ ಚೆಕ್ ಮಾಡಲು ತಲಾ 100 ರೊಟ್ಟಿ 10 ಬಾಕ್ಸ್(ಒಂದು ಬಾಕ್ಸ್‌ನಲ್ಲಿ 10 ರೊಟ್ಟಿ) ಸ್ಯಾಂಪಲ್‌ನ್ನು ಮುಂದಿನ ವಾರ ಫ್ಲೈಟ್ ಮೂಲಕ ಕಳಿಸಲಾಗುತ್ತಿದೆ.



ಕಲಬುರಗಿ ರೊಟ್ಟಿ ಈಗಾಗಲೇ ಆನ್‌ಲೈನ್‌ನಲ್ಲಿ ಲಭ್ಯವಿದೆ. ಇದೀಗ ವಿದೇಶಕ್ಕೆ ಕಳಿಸಲು ಹೊಸ ಹೆಜ್ಜೆ ಇಡಲಾಗುತ್ತಿದ್ದು, ಅಮೆರಿಕಾ ಸೇರಿ 3 ರಾಷ್ಟ್ರಕ್ಕೆ 10 ಬಾಕ್ಸ್‌ಗಳಂತೆ 100 ರೊಟ್ಟಿ ಸ್ಯಾಂಪಲ್ ಕಳಿಸಲಾಗುತ್ತಿದೆ. ಬಳಿಕ ಆರ್ಡರ್ ಬಂದರೆ 10 ಸಾವಿರದ ಮೊದಲ ಕನ್ಸೈನಮೆಂಟ್ ಹೋಗಲಿದೆ. ವಿದೇಶದಿಂದ ಆರ್ಡರ್ ಬರುವ ವಿಶ್ವಾಸ ನಮಗಿದೆ.

■ **ಪ್ರಿಯಾಂಕ್ ಖರ್ಗೆ,** ಉಸ್ತುವಾರಿ ಸಚಿವ, ಕಲಬುರಗಿ

ಕಲಬುರಗಿ ರೊಟ್ಟಿ ನಿರೀಕ್ಷೆಗೂ ಮೀರಿ ಯಶಸ್ಸು ಕಾಣುತ್ತಿದೆ. ವೆಬ್‌ಸೈಟ್‌ನಲ್ಲಿಸಹ ಸಾಕಷ್ಟು ಜನರಿಂದ ಕರೆ ಬರುತ್ತಿದ್ದು, ನಾವು ಇದೀಗ ವಿದೇಶಕ್ಕೆ ಸರಕು ಮಾಡಲು ಎಕ್ಸ್‌ಪೋರ್ಟ್ ಪರವಾನಿಗಾಗಿ ಪ್ರಯತ್ನ ನಡೆಸಿದ್ದೇವೆ. ಪ್ರಧಾನಿ ಹಾಗೂ ಸಿಎಂ ಸಹ ಕಲಬುರಗಿ ರೊಟ್ಟಿ ಕುರಿತು ಪ್ರಕಟಿಸಿ, ವ್ಯಕ್ತಪಡಿಸಿ, ಮಹಿಳೆಯರಿಗೆ ಉತ್ತೇಜನ ನೀಡಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಲಬುರಗಿ ರೊಟ್ಟಿ ಸದ್ದಾಗಿದ್ದು ಖುಷಿ ನೀಡುತ್ತಿದೆ.

■ **ಫೌಜಿಯಾ ತರನ್ನುಮ್,** ಡಿಸಿ, ಕಲಬುರಗಿ



Hosadiganta pg 04

ಲವಲವಿಕ GARDEN ಲೋಕ

ಬಾಲ್ಕನಿಯ ಸೊಗಸು ಹೆಚ್ಚಿಸುವ ಶಂಖಿಪುಷ್ಪ



- ಬಟರ್‌ಫ್ಲೈ ಪೀ, ಅಪರಾಜಿತಾ ಎಂದು ಕರೆಯುವ ಸುಂದರ ಹೂವು ಬಿಡುವ ಬಳ್ಳಿ ಸಸ್ಯವಾದ ಶಂಖಿಪುಷ್ಪ ಬಾಲ್ಕನಿಯ ಅಂದವನ್ನು ಹೆಚ್ಚಿಸುತ್ತದೆ. ದುರ್ಗಾ ದೇವಿಯ ನೆಚ್ಚಿನ ಈ ಹೂವು ಗಾಢನೀಲಿ, ಬಿಳಿ, ತಿಳಿ ಗುಲಾಬಿ ಬಣ್ಣಗಳಲ್ಲೂ ಬಿಡುತ್ತದೆ.
- ಪ್ರತಿದಿನ ಸಾಕಷ್ಟು ನೇರ ಸೂರ್ಯನ ಬೆಳಕು ಬೀಳುವ ಸ್ಥಳದಲ್ಲಿ ಈ ಸಸ್ಯ ಉತ್ತಮವಾಗಿ ಬೆಳೆಯುತ್ತದೆ.
- ಇದು ಬಳ್ಳಿ ಗಿಡವಾದ್ದರಿಂದ ಬೇರಿಗೆ ಸಾಕಷ್ಟು ಸ್ಥಳದ ಅವಕಾಶವಿರುವ, ಚೆನ್ನಾಗಿ ನೀರು ಹರಿದು ಹೋಗುವ ಪಾಟ್ ಆಗತ್ಯ. ಸುಮಾರು 8ರಿಂದ 12 ಇಂಚು ಆಳ, 12 ರಿಂದ 14 ಇಂಚು ಅಗಲವಿರುವ ಪಾಟ್ ಆಯ್ಕೆ ಮಾಡಿ.
- ಸಡಿಲವಾದ ಪಾಟ್ ಮಿಶ್ರಣಕ್ಕೆ ಸ್ವಲ್ಪ ಕಾಂಪೋಸ್ಟ್ ಮಿಶ್ರಣ ಮಾಡಿದ ಫಲವತ್ತಾದ ಮಣ್ಣಿನಲ್ಲಿ ಉತ್ತಮವಾಗಿ ಗಿಡ ಬೆಳೆಯುತ್ತದೆ.
- ಬೀಜಗಳಿಂದ ಸಸ್ಯಗಳನ್ನು ಬೆಳೆಸುವುದು ಉತ್ತಮ. ಮಣ್ಣನ್ನಲ್ಲಿ ನೆಡುವ ಕೆಲವು ಗಂಟೆಗಳ ಮುಂಚೆ ಅಥವಾ ರಾತ್ರಿ ಪೂರ ನೀರಿನಲ್ಲಿ ನೆನೆಸಿದ ಬೀಜಗಳನ್ನು ಬಿತ್ತಿದರೆ ಬೀಜ ಬೇಗ ಮೊಳಕೆಯೊಡೆಯಲು ಸಹಕಾರಿ. ಒಂದು ಇಂಚು ಆಳದಲ್ಲಿ ಬೀಜಗಳನ್ನು ಒಂದಕ್ಕೊಂದು ಸೇರದಂತೆ ಅಂತರದಲ್ಲಿ ಬಿತ್ತಿ ಮಣ್ಣನ್ನು ಹಗುರವಾಗಿ ಮುಚ್ಚಿ. ಮೊಳಕೆಯೊಡೆಯುವವರೆಗೆ ಮಣ್ಣನ್ನು ಸ್ವಲ್ಪ ತೇವವಾಗಿಡಿ.
- ಮೊಡಳಕೆಯೊಡೆದು ಗಿಡ ಚಿಗುರೊಡೆಯುವಾಗ ಈ ಸಸ್ಯ ತೇವಾಂಶವನ್ನು ಇಷ್ಟಪಡುತ್ತದೆ. ನೀರನ್ನು ಎಚ್ಚೆತ್ತಿಕೆಯಿಂದ ಹಾಕಬೇಕು. ಅತಿಯಾದ ನೀರು ಬೇರು ಕೊಳೆಯುವುದಕ್ಕೆ ಕಾರಣವಾಗಬಹುದು. ಮಣ್ಣಿನ ಮೇಲಿನ ಪದರ ಒಣಗಿದಾಗ ಮಾತ್ರ ನೀರು ನೀಡುವುದು ಉತ್ತಮ.
- ಗಿಡ ಹಬ್ಬಲು ಅದಕ್ಕೆ ಸಣ್ಣ ಟ್ರೆಲ್ಲಿಸ್, ರೇಲಿಂಗ್, ತಂತಿ ಬೌಕಟ್ಟು ಅಥವಾ ಬಾಲ್ಕನಿ ಗ್ರಿಲ್ ಅನ್ನು ಆಸರೆಯಾಗಿ ನೀಡಬಹುದು.
- ಒಣಗಿದ ಎಲೆಗಳನ್ನು ತೆಗೆದು ಗಿಡವನ್ನು ಆಗಾಗ್ಗೆ ಟ್ರಿಮ್ ಮಾಡಬೇಕು. ಇದರಿಂದ ಗಿಡ ಪೊದೆಯಂತೆ ಬೆಳೆದು ಉತ್ತಮ ಹೂವು ಬಿಡಲು ಸಹಕಾರಿಯಾಗುತ್ತದೆ.
- ಇದಕ್ಕೆ ಗಿಡಹೇನುಗಳು ಅಥವಾ ಇತರ ಸಣ್ಣ ಕೀಟಗಳು ಬಾಧಿಸಬಹುದು. ಸೂಕ್ತ ಕ್ರಿಮಿನಾಶಕ ಬಳಸಿ. ■

V-karnataka pg 05

ಅವಳಿ ಬಿರುಗಾಳಿ

ಜಗತ್ತಿನ ಅತಿದೊಡ್ಡ ಕೃಷಿ ಪ್ರಧಾನ ದೇಶಗಳಲ್ಲಿ ಭಾರತವೂ ಒಂದು. ದೇಶದ ಅರ್ಧಕ್ಕಿಂತ ಹೆಚ್ಚು ಜನರು ಇಂದಿಗೂ ಜೀವನೋಪಾಯಕ್ಕಾಗಿ ಕೃಷಿಯನ್ನೇ ಅವಲಂಬಿಸಿದ್ದಾರೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ದೇಶದ ಕೃಷಿ ವಲಯ ಅಭೂತಪೂರ್ವ ಸವಾಲುಗಳನ್ನು ಎದುರಿಸುತ್ತಿದೆ. ಅವುಗಳನ್ನು ಪ್ರಮುಖವಾಗಿ ಎರಡು ವರ್ಗಗಳಾಗಿ ವಿಂಗಡಿಸಬಹುದು. ಮೊದಲನೆಯದು, ಪ್ರಕೃತಿಯ ಮುನಿಸಿನಿಂದ ಉಂಟಾದ ಹವಾಮಾನ ಬಿಕ್ಕಟ್ಟು. ಎರಡನೆಯದು, ಮಾನವ ನಿರ್ಮಿತ ಜಾಗತಿಕ ರಾಜಕೀಯ ಸಂಘರ್ಷ. ಈ ಎರಡೂ ಅಂಶಗಳು ಭಾರತದ ಆಹಾರ ಭದ್ರತೆ ಮತ್ತು ಗ್ರಾಮೀಣ ಆರ್ಥಿಕತೆಯನ್ನು ಸಂಕಷ್ಟಕ್ಕೆ ತಳ್ಳಿವೆ.



ಕೃಷಿ ಕ್ಷೇತ್ರಕ್ಕೆ ಹವಾಮಾನ ಸಮಸ್ಯೆ, ಯುದ್ಧ ಸಂಕಷ್ಟ

ಅನಿಶ್ಚಿತತೆಯ ಹೊಸ ನಮೂನೆಗಳು

ಹವಾಮಾನ ಬದಲಾವಣೆ ಈಗ ಒಂದು ಪರಿಸರ ಸಮಸ್ಯೆಯಾಗಿ ಉಳಿದಿಲ್ಲ; ಇದು ರೈತನ ಪಾಲಿಗೆ ಆರ್ಥಿಕ ದುರಂತವಾಗಿ ಪರಿಣಮಿಸಿದೆ. ಶೇ. 50ಕ್ಕಿಂತ ಹೆಚ್ಚು ಕೃಷಿಯು ಮಾನ್ಸೂನ್ ಮಳೆಯ ಮೇಲೆಯೇ ಅವಲಂಬಿತ ಆಗಿರುವುದರಿಂದ, ಮಳೆಯ ಪ್ಯಾಟರ್ನ್‌ನಲ್ಲಿ ಆಗುವ ಸಣ್ಣ ಬದಲಾವಣೆಯೂ ವ್ಯವಸಾಯದ ಮೇಲೆ ಭಾರಿ ಪರಿಣಾಮ ಬೀರುತ್ತದೆ.

■ **ಎಲ್‌ನಿನೋದಿಂದ ಮುಂಗಾರು ಏರುಪೇರು:** ಎಲ್‌ನಿನೋ ಎಂಬ ಹವಾಮಾನ ವೈಪರೀತ್ಯದ ಪ್ರಭಾವದಿಂದಾಗಿ ಭಾರತದಲ್ಲಿ ಮಳೆಯ ಪ್ರಮಾಣ ತೀವ್ರವಾಗಿ ಕುಸಿಯುತ್ತಿದೆ. ಪೆಸಿಫಿಕ್ ಸಾಗರದ ಉಷ್ಣಾಂಶ ಏರಿಕೆ ಈಗ ಭಾರತದ ಮಾನ್ಸೂನ್ ಗಾಳಿಯನ್ನು ದುರ್ಬಲಗೊಳಿಸುತ್ತಿದೆ. ಇದರಿಂದಾಗಿ ಬಿತ್ತನೆಯ ಸಮಯದಲ್ಲಿ ಮಳೆ ಬಾರದೆ ರೈತರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಮತ್ತೊಂದೆಡೆ, ಒಮ್ಮೆಲೆ ಅರಿಶಿಷ್ಟವಾಗಿ ಸುರಿಯುವ ಅತಿಯಾದ ಮಳೆಯಿಂದ ಬೆಳೆಗಳು ಹಾಳಾಗುತ್ತಿವೆ.

■ **ಇಳುವರಿಗೆ ತಾಪಮಾನ ಏರಿಕೆಯ ಹೊಡೆತ:** ಹವಾಮಾನ ಬದಲಾವಣೆಯ ನೇರ ಪರಿಣಾಮವೆಂದರೆ ಹೆಚ್ಚುತ್ತಿರುವ ತಾಪಮಾನ. ವಿಶೇಷವಾಗಿ ಫೆಬ್ರವರಿ ಮತ್ತು ಮಾರ್ಚ್‌ನಲ್ಲಿ ಕಂಡುಬರುವ ಹಠಾತ್ ಉಷ್ಣಾಂಶ ಏರಿಕೆ ಗೋಧಿ ಇಳುವರಿಯನ್ನು ಶೇ. 10ರಿಂದ 20ರಷ್ಟು ಕಡಿಮೆ ಮಾಡುತ್ತಿದೆ. ಧಾನ್ಯಗಳು ಪಕ್ವವಾಗುವ ಮೊದಲೇ ಶಾಖಕ್ಕೆ ಸಿಲುಕಿ ಒಣಗುತ್ತಿವೆ. ಇದು ದೇಶದ ಆಹಾರ ಉತ್ಪಾದನೆ ಮತ್ತು ಸಂಗ್ರಹದ ಮೇಲೆ ದುಷ್ಪರಿಣಾಮ ಉಂಟು ಮಾಡುತ್ತಿದೆ.

■ **ಅಂತರ್ಜಲ ಮಟ್ಟ ಕುಸಿತ:** ಮಳೆ ಕೊರತೆಯಿಂದಾಗಿ ನದಿಗಳು ಮತ್ತು ಜಲಾಶಯಗಳು ಬತ್ತುತ್ತಿವೆ. ಇದರಿಂದಾಗಿ ರೈತರು ಅಂತರ್ಜಲವನ್ನು ಅತಿಯಾಗಿ ಅವಲಂಬಿಸಬೇಕಾಗಿದೆ. ಆದರೆ, ಅಂತರ್ಜಲ ಮಟ್ಟವೂ ಅಪಾಯಕಾರಿ ಮಟ್ಟಕ್ಕೆ ಕುಸಿಯುತ್ತಿರುವುದು ಕೃಷಿಯ ಭವಿಷ್ಯದ ಬಗ್ಗೆಯೇ ಆನಿಶ್ಚಿತತೆ ಮೂಡಿಸಿದೆ.



ರಫ್ತು ನಿರ್ಬಂಧ

ದೇಶೀಯವಾಗಿ ಬೆಲೆ ನಿಯಂತ್ರಿಸಲು ಕೇಂದ್ರ ಸರ್ಕಾರ ಗೋಧಿ ಮತ್ತು ಅಕ್ಕಿ ರಫ್ತಿನ ಮೇಲೆ ನಿರ್ಬಂಧ ಹೇರಿದೆ. ಇದರಿಂದ ದೇಶದ ಒಳಗೆ ಬೆಲೆಗಳು ನಿಯಂತ್ರಣಕ್ಕೆ ಬಂದರೂ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಲಾಭ ಗಳಿಸುವ ಅವಕಾಶವನ್ನು ಭಾರತೀಯ ರೈತರು ಕಳೆದುಕೊಳ್ಳುತ್ತಿದ್ದಾರೆ.

ದಾಸ್ತಾನು ಕೊರತೆ

ಹವಾಮಾನ ವೈಪರೀತ್ಯದಿಂದಾಗಿ ಸರ್ಕಾರಿ ಗೋದಾಮುಗಳಲ್ಲಿನ ಬಫರ್ ಸ್ಟಾಕ್ ಪ್ರಮಾಣ ಕಡಿಮೆಯಾಗುತ್ತಿದೆ. ಇದು ತುರ್ತು ಸಂದರ್ಭಗಳಲ್ಲಿನ ಆಹಾರ ಭದ್ರತೆಗೆ ಸವಾಲಾಗಿದೆ.

ಯುದ್ಧದ ಕರಿನೆರಳು

ಹಲವು ವರ್ಷಗಳಿಂದ ನಡೆಯುತ್ತಿರುವ ರಷ್ಯಾ-ಯೂಕ್ರೇನ್ ಸಂಘರ್ಷ ಮತ್ತು ಇತ್ತೀಚೆಗಷ್ಟೇ 40 ದಿನಗಳ ಕಾಲ ನಡೆದ ಪಶ್ಚಿಮ ಏಷ್ಯಾ ಯುದ್ಧದಿಂದಾಗಿ ಭಾರತದ ರೈತರ ಮೇಲೆ ನೇರ ಆರ್ಥಿಕ ಪರಿಣಾಮ ಉಂಟಾಗಿದೆ.

■ **ರಸಗೊಬ್ಬರ ಬಿಕ್ಕಟ್ಟು:** ಭಾರತ ರಸಗೊಬ್ಬರವನ್ನು ಗಣನೀಯ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುತ್ತದೆ. ರಷ್ಯಾ ಮತ್ತು ಬೆಲಾರುಸ್ ಜಗತ್ತಿನ ಪ್ರಮುಖ ಪೊಟ್ಯಾಷ್ ಮತ್ತು ಯೂರಿಯಾ ರಫ್ತುದಾರ ದೇಶಗಳು. ಯುದ್ಧದಿಂದಾಗಿ ಪೂರೈಕೆ ಸರಪಳಿ ಕಡಿತಗೊಂಡಿದ್ದು, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ರಸಗೊಬ್ಬರಗಳ ಬೆಲೆ ಗಗನಕ್ಕೇರಿದೆ. ಸರ್ಕಾರ ರೈತರಿಗೆ ಸಬ್ಸಿಡಿ ನೀಡಿದರೂ, ಮಾರುಕಟ್ಟೆಯಲ್ಲಿ ಲಭ್ಯತೆ ಇಲ್ಲ. ಹಾಗಾಗಿ ಕೃಷಿ ಉತ್ಪಾದನೆ ಕುಂಠಿತಗೊಂಡಿದೆ.

■ **ಕೃಷಿ ವೆಚ್ಚ ಹೆಚ್ಚಿಸಿದ ಇಂಧನ ಬೆಲೆ:** ಟ್ರ್ಯಾಕ್ಟರ್‌ಗಳು, ಪಂಪ್‌ಸೆಟ್‌ಗಳು ಮತ್ತು ಕೃಷಿ ಯಂತ್ರೋಪಕರಣಗಳಿಗೆ ಡೀಸೆಲ್ ಅತ್ಯಗತ್ಯ. ಜಾಗತಿಕ ಯುದ್ಧದ ಭೀತಿಯಿಂದ ಕಚ್ಚಾ ತೈಲ ಬೆಲೆ ಏರಿಕೆಯಾದಾಗ, ಕೃಷಿ ವೆಚ್ಚ ತಾನಾಗಿಯೇ ಹೆಚ್ಚಾಗುತ್ತದೆ. ಇದರಿಂದ ರೈತನ ಲಾಭದ ಪ್ರಮಾಣ ಕುಸಿಯುತ್ತಿದೆ.

■ **ಖಾದ್ಯ ತೈಲದ ಕೊರತೆ:** ಭಾರತ ಸೂರ್ಯಕಾಂತಿ ಎಣ್ಣೆಯ ಹೆಚ್ಚಿನ ಭಾಗವನ್ನು ಯೂಕ್ರೇನ್‌ನಿಂದ ಆಮದು ಮಾಡಿಕೊಳ್ಳುತ್ತಿತ್ತು. ಯುದ್ಧದ ಶುರುವಾದಾಗಿನಿಂದ ಈ ಪೂರೈಕೆ ಸ್ಥಗಿತಗೊಂಡಿತು. ಇದರಿಂದಾಗಿ ಭಾರತದ ಮಾರುಕಟ್ಟೆಯಲ್ಲಿ ಖಾದ್ಯ ತೈಲಗಳ ಬೆಲೆ ದಾಖಲೆ ಮಟ್ಟಕ್ಕೆ ತಲುಪಿತು. ಇದು ಗ್ರಾಹಕರಿಗೂ ಹೊರೆಯಾಯಿತಲ್ಲದೆ, ತೈಲಬೀಜ ಬೆಳೆಯುವ ರೈತರಿಗೂ ಮಾರುಕಟ್ಟೆಯ ಅನಿಶ್ಚಿತತೆಯನ್ನು ತಂದೊಡ್ಡಿತು.

■ **ಆಹಾರ ಪದಾರ್ಥಗಳ ಬೆಲೆ ಏರಿಕೆ:** ಕೃಷಿ ಉತ್ಪನ್ನಗಳ ಬೆಲೆ ಏರಿಕೆ ನೇರವಾಗಿ ದೇಶದ ಹಣದುಬ್ಬರದ ಮೇಲೆ ಪರಿಣಾಮ ಉಂಟು ಮಾಡುತ್ತದೆ. ಅಕ್ಕಿ, ಬೇಳೆಕಾಳುಗಳು ಮತ್ತು ತರಕಾರಿಗಳ ಬೆಲೆ ಏರಿಕೆ ಸಾಮಾಜದ ಕೆಳವರ್ಗದ ಜನರಿಗೆ ತೀವ್ರ ಸಮಸ್ಯೆ ತಂದೊಡ್ಡಿದೆ.

ಕೃಷಿ-ಉದ್ಯಮಶೀಲತೆ, ಸ್ಟಾರ್ಟಪ್ ಕ್ರಾಂತಿ

ಇಂದಿನ ಸವಾಲುಗಳನ್ನು ಎದುರಿಸಲು ಯುವಜನರು ಕೃಷಿಯಲ್ಲಿ ಉದ್ಯಮಶೀಲತೆಯನ್ನು ಬೆಳೆಸಿಕೊಳ್ಳಬೇಕಿದೆ. ಮಧ್ಯವರ್ತಿಗಳ ಹಾವಳಿ ತಪ್ಪಿಸಲು ರೈತರು ತಾವೇ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವುದು ಅಥವಾ ಫಾರ್ಮರ್ ಪ್ರೊಡ್ಯೂಸ್ ಆರ್ಗನೈಸೇಷನ್ (ಎಫ್‌ಪಿಒ) ಮೂಲಕ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವುದು ಉತ್ತಮ. ಕೀಟನಾಶಕಗಳ ಸಿಂಪಡಣೆ ಮತ್ತು ಬೆಳೆ ಸಮೀಕ್ಷೆಗೆ ಡ್ರೋನ್‌ಗಳನ್ನು ಬಳಸುವುದರಿಂದ ಕಾರ್ಮಿಕರ ಕೊರತೆ ನೀಗಿಸಿ ನಿಖರತೆ ಸಾಧಿಸಬಹುದು.

ಸಣ್ಣ ರೈತರ ಆರ್ಥಿಕ ಅಸ್ಥಿರತೆ

ಭಾರತದ ಶೇ. 80ಕ್ಕಿಂತ ಹೆಚ್ಚು ರೈತರು ಸಣ್ಣ ಹಿಡುವಳಿದಾರರು. ಇವರಿಗೆ ಹವಾಮಾನ ಬದಲಾವಣೆ ಅಥವಾ ಜಾಗತಿಕ ಯುದ್ಧದಿಂದ ಉಂಟಾಗುವ ಆರ್ಥಿಕ ಹೊಡೆತವನ್ನು ತಡೆದುಕೊಳ್ಳುವ ಶಕ್ತಿ ಕಡಿಮೆ. ಕೃಷಿ ವೆಚ್ಚ ಹೆಚ್ಚಾದಂತೆ ರೈತರು ಖಾಸಗಿ ಲೇವಾದೇವಿದಾರರಿಂದ ಹೆಚ್ಚಿನ ಬಡ್ಡಿಗೆ ಸಾಲ ಪಡೆಯುತ್ತಿದ್ದಾರೆ. ಬೆಳೆ ವಿಫಲವಾದಾಗ ಈ ಸಾಲವೇ ಆತ್ಮಹತ್ಯೆಯಂತಹ ನಿರ್ಧಾರಗಳಿಗೆ ಪ್ರೇರೇಪಿಸುತ್ತಿದೆ. ಪ್ರಧಾನಮಂತ್ರಿ ಫಸಲ್ ಬಿಮಾದಂತಹ ವಿಮಾ ಯೋಜನೆಗಳು ಇನ್ನೂ ತಳಮಟ್ಟದ ರೈತರಿಗೆ ಸರಿಯಾಗಿ ತಲುಪುತ್ತಿಲ್ಲ. ಹವಾಮಾನ ವೈಪರೀತ್ಯದಿಂದ ಉಂಟಾಗುವ ನಷ್ಟಕ್ಕೆ ತಕ್ಷಣದ ಪರಿಹಾರ ಸಿಗುವಂತಾಗಲು ತಂತ್ರಜ್ಞಾನ ಆಧಾರಿತ ವಿಮಾ ಪಾವತಿ ವ್ಯವಸ್ಥೆ ಜಾರಿಗೆ ಬರಬೇಕಿದೆ.





ನೀರಿನ ನಿರ್ವಹಣೆ

ಜಾಗತಿಕ ತಾಪಮಾನ ಏರಿಕೆಯಿಂದಾಗಿ ಹಿಮಾಲಯದ ಹಿಮನದಿಗಳು ಕರಗುತ್ತಿವೆ. ಇದು ಉತ್ತರ ಭಾರತದ ನದಿಗಳ ನೀರಿನ ಹರಿವಿನ ಮೇಲೆ ಪರಿಣಾಮ ಬೀರುತ್ತಿದೆ. ಇಸ್ರೇಲ್ ಮಾದರಿಯ ಹನಿ ನೀರಾವರಿ ಪದ್ಧತಿಯನ್ನು ದೇಶದ ಪ್ರತಿಯೊಂದು ಹಳ್ಳಿಗೂ ತಲುಪಿಸುವುದು ಅಗತ್ಯ. ಇದು ಯುದ್ಧದ ಸಮಯದಲ್ಲಿ ಇಂಧನ ಮತ್ತು ರಸಗೊಬ್ಬರವನ್ನು ಉಳಿಸಲು ನೆರವಾಗುತ್ತದೆ. ಏಕೆಂದರೆ ಹನಿ ನೀರಾವರಿ ಮೂಲಕ ರಸಗೊಬ್ಬರವನ್ನು ನೇರವಾಗಿ ಬೇರುಗಳಿಗೆ ತಲುಪಿಸಬಹುದು. ಹವಾಮಾನ ಬದಲಾವಣೆಯಿಂದಾಗಿ ನೀರಿನ ಲಭ್ಯತೆ ಕಡಿಮೆಯಾದಾಗ, ನೆರೆಯ ದೇಶಗಳೊಂದಿಗೆ ನದಿ ನೀರು ಹಂಚಿಕೆಯ ವಿಚಾರದಲ್ಲಿ ರಾಜತಾಂತ್ರಿಕ ಸಂಘರ್ಷಗಳು ಏರ್ಪಡುತ್ತಿವೆ. ಇದು ಕೃಷಿ ವಲಯದ ಮೇಲೆ ಪರೋಕ್ಷವಾಗಿ ಭೌಗೋಳಿಕ ರಾಜಕೀಯ ಒತ್ತಡವನ್ನು ಹೆಚ್ಚಿಸುತ್ತಿದೆ.

ನಾವು ಮಾಡಬೇಕಾದುದೇನು?

ಈ ಬಿಕ್ಕಟ್ಟುಗಳನ್ನು ಎದುರಿಸಲು ಸರ್ಕಾರ ಎಷ್ಟೇ ಪರಿಹಾರ ಧನ ನೀಡಿದರೂ ಸಾಲುವುದಿಲ್ಲ; ಕೃಷಿ ಪದ್ಧತಿಯಲ್ಲೇ ಮೂಲಭೂತ ಬದಲಾವಣೆಗಳನ್ನು ಮಾಡಿಕೊಳ್ಳಬೇಕು.

■ **ಸ್ಮಾರ್ಟ್ ಕೃಷಿ:** ಹವಾಮಾನ ಮುನ್ಸೂಚನೆಯನ್ನು ರೈತರಿಗೆ ನಿಖರವಾಗಿ ತಲುಪಿಸುವ ತಂತ್ರಜ್ಞಾನಗಳು ಬೆಳೆಯಬೇಕು. ಯಾವ ಸಮಯದಲ್ಲಿ ಬಿತ್ತನೆ ಮಾಡಬೇಕು ಮತ್ತು ಯಾವ ಬೆಳೆಯನ್ನು ಆರಿಸಿಕೊಳ್ಳಬೇಕು ಎಂಬುದನ್ನು ನಿರ್ಧರಿಸಲು ಕೃತಕ ಬುದ್ಧಿಮತ್ತೆಯ (ಎಐ) ಸಹಾಯ ಪಡೆಯಬಹುದು.

■ **ವೈವಿಧ್ಯಮಯ ಬೆಳೆ:** ಕೇವಲ ಅಕ್ಕಿ ಮತ್ತು ಗೋಧಿ ಮೇಲೆ ಅವಲಂಬಿತವಾಗದೆ, ಕಡಿಮೆ ನೀರಿನಲ್ಲೇ ಬೆಳೆಯಬಹುದಾದ ಮತ್ತು ಹವಾಮಾನ ಏರುಪೇರನ್ನು ತಡೆದುಕೊಳ್ಳಲು ಶಕ್ತವಾದ ಸಿರಿಧಾನ್ಯಗಳ ಕೃಷಿಗೆ ಹೆಚ್ಚಿನ ಒತ್ತು ನೀಡಬೇಕು. ಇದು ಮಣ್ಣಿನ ಫಲವತ್ತತೆಯನ್ನು ಕಾಪಾಡುವುದಲ್ಲದೆ ಆರೋಗ್ಯಕ್ಕೂ ಪೂರಕ.

■ **ರಸಗೊಬ್ಬರ ಸ್ವಾವಲಂಬನೆ:** ಸಾವಯವ ಮತ್ತು ನೈಸರ್ಗಿಕ ಕೃಷಿಯನ್ನು ಉತ್ತೇಜಿಸುವ ಮೂಲಕ ವಿದೇಶಿ ರಾಸಾಯನಿಕ ರಸಗೊಬ್ಬರಗಳ ಮೇಲಿನ ಅವಲಂಬನೆಯನ್ನು ತಗ್ಗಿಸಬೇಕು. ನ್ಯಾನೋ ಯೂರಿಯಾದಂತಹ ಸ್ಥಳೀಯ ಸಂಶೋಧನೆಗಳನ್ನು ಉತ್ತೇಜಿಸಬೇಕು.

ಶೇಖರಣಾ ಮೂಲಸೌಕರ್ಯ

ಬೆಳೆಗಳನ್ನು ರಕ್ಷಿಸಲು ಕೇವಲ ಬಿತ್ತನೆ ಮತ್ತು ಕಟಾವು ಸುಧಾರಿಸಿದರೆ ಸಾಲದು, ಕಟಾವಿನ ನಂತರದ ನಿರ್ವಹಣೆಯೂ ಮುಖ್ಯವಾಗುತ್ತದೆ. ಭಾರತದಲ್ಲಿ ಪ್ರತಿವರ್ಷ ಸುಮಾರು ಶೇ. 15-20ರಷ್ಟು ಕೃಷಿ ಉತ್ಪನ್ನಗಳು ಸರಿಯಾದ ಶೇಖರಣಾ ವ್ಯವಸ್ಥೆ ಇಲ್ಲದೆ ವ್ಯರ್ಥವಾಗುತ್ತಿವೆ. ತರಕಾರಿ ಮತ್ತು ಹಣ್ಣುಗಳ ಬೆಲೆ ಏರಿಕೆಯಾದಾಗ, ರೈತರು ತಮ್ಮ ಉತ್ಪನ್ನಗಳನ್ನು ಸಂಗ್ರಹಿಸಿಡಲು ಆಧುನಿಕ ಕೋಲ್ಡ್ ಸ್ಟೋರೇಜ್‌ಗಳ ಕೊರತೆ ಎದುರಿಸುತ್ತಿದ್ದಾರೆ. ಯುದ್ಧದ ಕಾರಣದಿಂದಾಗಿ ರಫ್ತು ನಿಂತಾಗ, ಈ ಉತ್ಪನ್ನಗಳನ್ನು ದೀರ್ಘಕಾಲ ಇಟ್ಟುಕೊಳ್ಳಲು ಸಾಧ್ಯವಾಗುತ್ತಿಲ್ಲ. ರೈತರು ತಮ್ಮ ಧಾನ್ಯಗಳನ್ನು ಮಳೆಯಿಂದ ರಕ್ಷಿಸಲು ವೈಜ್ಞಾನಿಕ ಗೋದಾಮುಗಳ ಅಗತ್ಯವಿದೆ.



ಪರಿಸರ ಸಮತೋಲನ

ಜಾಗತಿಕವಾಗಿ ಕಾರ್ಬನ್ ಎಮಿಷನ್ ಕಡಿಮೆ ಮಾಡಲು ಕೃಷಿ ವಲಯವೂ ಕೊಡುಗೆ ನೀಡಬೇಕಿದೆ. ಭತ್ತದ ಗದ್ದೆಗಳಿಂದ ಹೊರಬರುವ ಮಿಥೇನ್ ಅನಿಲ ಹವಾಮಾನ ಬದಲಾವಣೆಗೆ ಒಂದು ಕಾರಣ. ಆದ್ದರಿಂದ, ಕಡಿಮೆ ನೀರು ಬಳಸುವ ಭತ್ತದ ತಳಿಗಳನ್ನು ಬೆಳೆಯುವುದು ಮತ್ತು ಬೆಳೆ ತ್ಯಾಜ್ಯ ಸುಡುವುದನ್ನು ತಪ್ಪಿಸುವುದು ಅತ್ಯಗತ್ಯ. ವಾಯು ಮಾಲಿನ್ಯ ತಡೆಯಲು ಇದು ಅತಿ ಮುಖ್ಯ.

Vijayavani Pg 13

Tea bodies urge PM to scrap 50% auction rule

Planters in Assam and Bengal say it adds to cost burden and limits profits

SUMIR KARMAKAR
GUWAHATI, DHNS

MEMO TO MODI

- Tea bodies complain that rule requires 50% of tea sold via public auctions
- Memo says mandate contradicts ease-of-business goals
- Producers seek freedom to choose sale mode



Prime Minister Narendra Modi with women workers at a tea garden in Dibrugarh, Assam. PTI FILE

Four prominent organisations representing tea planters and producers in Assam and West Bengal have approached Prime Minister Narendra Modi, seeking withdrawal or modification of the directive mandating the sale of 50% of tea through public auctions.

In a memorandum to the PM, the Assam Bought Leaf Tea Manufacturers Association (ABLTMA), North Eastern Tea Association (NETA), Bharatiya Cha Parishad (BCP) and North Bengal Tea Producers Welfare Association (NBTPWA) said that compulsory sale through public auctions places tea producers at a significant disadvantage.

"The auction system involves higher transaction costs and longer selling cycles compared to ex-factory sales. The cost of selling through auctions is approximately Rs 10 per kilogram, amounting to nearly 5% of the average selling price—often exceeding the net profit margins of producers," said the joint memorandum, submitted recently. It said the directive, issued under the Tea (Marketing) Control (Second Amendment) Order, 2015 and the Tea (Marketing) Control (Amendment) Order, 2024, had remained unimplemented. However, a fresh directive was issued by the Ministry of Commerce and Industry in February this year for its enforcement.

The memorandum noted that several expert committees had examined the auction system, but none advocated mandatory auction sales. "This mandate is inconsistent with the government's policy of promoting ease of doing business. Producers should have the flexibility to choose the most efficient and viable mode of sale," it said.

North India, including Assam and West Bengal, accounts for about 83% of India's tea output, while South India contributes around 17%. Of the annual 1,350 million kg produced, North India yields nearly 1,120 million kg. The four associations from Assam and Bengal together represent nearly 60% of North India's production.

Dec Hrd Pg 08